**ಓ.ಎಸ್. ನಂ. 611/2014 ಪಿ.ಡಬ್ಲೂ-1 ಹೆಸರು - ಸೋಮಶೇಖರ್**

**ಸಾಕ್ಷಿಯನ್ನು ದಿನಾಂಕಃ 13.04.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.ಬಿ.ವೈ., ವಕೀಲರಿಂದಃ-**

ನಾನು ಪದವಿ ವ್ಯಾಸಂಗ ಮಾಡಿರುತ್ತೇನೆ. ನಾನು ವಾದಿಯಿಂದ ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿದ್ದೇನೆ ಎಂದರೆ ಸರಿ. ಸದರಿ ಕ್ರಯದ ಕರಾರು ಪತ್ರ ನೊಂದಣಿಯಾಗಿಲ್ಲ. ಸದರಿ ಕ್ರಯದ ಕರಾರು ಪತ್ರದ ಪ್ರಕಾರ ನನಗೆ ಸ್ವಾಧೀನತೆಯನ್ನು ವಹಿಸಿಕೊಟ್ಟಿಲ್ಲ. ನಾನು ಮೈಸೂರಿನಲ್ಲಿ ವಾಸಿಸುತ್ತಿದೇನೆ. ವಾದಿಗೆ ದಾವಾ ಸ್ವತ್ತಿನ ಕುರಿತು ಮಾಲಿಕತ್ವ ಇರುವ ಬಗ್ಗೆ ಕ್ರಯ ಪತ್ರವನ್ನು ಹಾಗೂ ಅಸೆಸ್ ಮೆಂಟ್ ದಾಖಲಾತಿಯನ್ನು ನೋಡಿದ್ದೇನೆ. ವಾದಿ ದಾವಾ ಸ್ವತ್ತನ್ನು ಸುಧಾ ಮತ್ತು ಶಿವಕುಮಾರ್ ದಂಪತಿಗಳಿಂದ ಖರೀದಿಸಿರುತ್ತಾರೆ. ಸುಧಾ ಮತ್ತು ಶಿವಕುಮಾರ್ ದಂಪತಿಗಳು ಯಾರಿಂದ ಕ್ರಯಕ್ಕೆ ಪಡೆದಿದ್ದರು ಎಂದು ಗೊತ್ತಿಲ್ಲ. ವಾದಿ ಈ ಹಿಂದೆ ಪ್ರತಿವಾದಿಯ ವಿರುದ್ಧ ಅಸಲು ದಾವಾ ಸಂಖ್ಯೆ 101/2007 ರಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ವಾದಿಯು ಸಲ್ಲಿಸಿದ್ದ ಸದರಿ ದಾವೆ ವಜಾ ಗೊಂಡಿರುತ್ತದೆ ಎಂದರೆ ಸರಿ. ಸದರಿ ತೀರ್ಪನ್ನು ನಾನು ಓದಿಲ್ಲ. ದಾವಾ ಸ್ವತ್ತಿನ ಕುರಿತಾಗಿ ಸದರಿ ದಾವೆಯಲ್ಲಿ ಮಾಲಿಕತ್ವದ ಕುರಿತು ನೀಡಿರುವ ನಿರ್ಣಯವನ್ನು ನಾನು ನೋಡಿಲ್ಲ. ಸದರಿ ದಾವೆಯ ತೀರ್ಪು ಮತ್ತು ಡಿಕ್ರಿಯ ವಿರುದ್ಧ ವಾದಿ ಮಾನ್ಯ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಲಯ, ನಂಜನಗೂಡು ರವರಲ್ಲಿ ಆರ್.ಎ. 23/2009 ರಂತೆ ಮೇಲ್ಮನವಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಮೇಲ್ಮನವಿಯ ತೀರ್ಪಿನ ಕುರಿತು ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿ ವಜಾ ಗೊಂಡಿರುತ್ತದೆ ಎಂದರೆ ಸರಿ. ಆರ್.ಎ.ಮೇಲ್ಮನವಿ 23/2009 ರ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲಾತಿಯನ್ನು ಸಲ್ಲಿಸಿಲ್ಲ. ಆರ್.ಎ. ಮೇಲ್ಮನವಿ 23/2009 ರ ತೀರ್ಪು ಮತ್ತು ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿದ್ದಾರೆ. ಸದರಿ ಮೇಲ್ಮನವಿಯ ಸಂಖ್ಯೆ ಗೊತ್ತಿಲ್ಲ. ವಾದಿ ಅಸಲು ದಾವಾ ಸಂ.101/2007 ಮತ್ತು ಆರ್.ಎ. ಸಂ.23/2009 ರ ತೀರ್ಪು ಮತ್ತು ಡಿಕ್ರಿಯನ್ನು ಒಪ್ಪಿಕೊಂಡು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

2. ವಾದಿಗೆ ಮಾರಾಟ ಮಾಡಿದಂತಹ ಸುಧಾ ಮತ್ತು ಶಿವಕುಮಾರ್ ದಂಪತಿಗೆ ದಾವಾ ಸ್ವತ್ತನ್ನು ಮಾರಾಟ ಮಾಡುವಂತಹ ಹಕ್ಕು ಮತ್ತು ಸ್ವಾಧೀನತೆ ಇರಲಿಲ್ಲ ಎಂದರೆ ಸರಿಯಲ್ಲ. ಸುಧಾ ಮತ್ತು ಶಿವಕುಮಾರ್ ದಂಪತಿಯ ಮಾರಾಟಗಾರರಿಗು ಕೂಡ ದಾವಾ ಸ್ವತ್ತಿನ ಕುರಿತಾಗಿ ಹಕ್ಕು ಮತ್ತು ಸ್ವಾಧೀನತೆ ಇರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತಿಗೆ ತೊಂದರೆ ನೀಡುತ್ತಿರುವ ಕಾರಣ ಮಾಲಿಕತ್ವಾ ಹಾಗೂ ತೊಂದರೆ

ನೀಡದಂತೆ ರಕ್ಷಣೆಯನ್ನು ಕೋರಿ ದಾವೆಯನ್ನು ಸಲ್ಲಿಸಿದ್ದೇವೆ. ವಾದಿಗೆ ದಾವಾ ಸ್ವತ್ತಿನ ಕುರಿತಾಗಿ ಹಕ್ಕು ಮತ್ತು ಸ್ವಾಧೀನತೆ ಇಲ್ಲದ ಕಾರಣದಿಂದ ವಾದಿ ಸಲ್ಲಿಸಿದ ದಾವೆ ಮತ್ತು ಮೇಲ್ಮನವಿ ವಜಾ ಗೊಂಡಿರುತ್ತದೇ ಎಂದರೆ ಸರಿಯಲ್ಲ. ಸದರಿ ದಾವೆ ಮತ್ತು ಮೇಲ್ಮನವಿ ವಜಾ ಗೊಂಡಿರುವ ಕಾರಣ ವಾದಿಗೆ ಈಗಲೂ ಕೂಡ ದಾವಾ ಸ್ವತ್ತಿನ ಕುರಿತಾಗಿ ಹಕ್ಕು ಮತ್ತು ಸ್ವಾಧೀನತೆ ಇಲ್ಲ ಎಂದರೆ ಸರಿಯಲ್ಲ. ಆಗಾಗಿ ವಾದಿಯು ಮಾಡಿಸಿಕೊಂಡಿರುವ ಕ್ರಯ ಪತ್ರ ಕಾನೂನಿನ ಪ್ರಕಾರ ಸಿಂಧುವಾದದ್ದಲ್ಲ ಎಂದರೆ ಸರಿಯಲ್ಲ. ವಾದಿ ಸಲ್ಲಿಸಿದ ಅಸಲು ದಾವಾ ಸಂ.101/2007 ರಲ್ಲಿ ಈ ಪ್ರಕರಣದ ಪ್ರತಿವಾದಿ ಏನು ನಿಲುವನ್ನು ತೆಗೆದುಕೊಂಡಿದ್ದರು ಎಂದು ಗೊತ್ತಿಲ್ಲ. ಪ್ರತಿವಾದಿ ಸಲ್ಲಿಸಿದ ಪ್ರತಿವಾದಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಪ್ರತಿವಾದ ಪತ್ರದಲ್ಲಿ ನಮೂದಿಸಿರುವ ವಿಚಾರಗಳ ಕುರಿತು ನನಗೆ ಖುದ್ದು ಮಾಹಿತಿ ಇಲ್ಲ. ವಾದಿಗೆ ಸಂಬಂಧಿಸಿದ್ದ ಕ್ರಯ ಪತ್ರ ಮತ್ತು ಅಸೆಸ್ ಮೆಂಟ್ ಅನ್ನು ಹೊರತುಪಡಿಸಿ ಇತರೆ ಯಾವುದೇ ದಾಖಲಾತಿಯನ್ನು ನೋಡಿಲ್ಲ. ಸದರಿ ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಲ್ಲ. ವಾದಿ ಮಾಡಿಸಿಕೊಂಡಿರುವ ಕ್ರಯ ಪತ್ರ ಕಾನೂನಿನ ಮಾನ್ಯತೆಯನ್ನು ಪಡೆಯದ ಕಾರಣ ವಾದಿಯ ಮಾಲಿಕರು ವಾದಿಗೆ ದಾವಾ ಸ್ವತ್ತಿನ ಸ್ವಾಧೀನತೆಯನ್ನು ವಹಿಸಿಕೊಟ್ಟಿಲ್ಲ ಎಂದರೆ ಸರಿಯಲ್ಲ.

3. ನಾನು ವಾದಿಯ ಸಾಮಾನ್ಯ ಮುಕ್ತಿಯಾರಾನಾಮೆಧಾರನಾಗಿ ಸಾಕ್ಷದ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಆದರೆ ಅದರಲ್ಲಿ ನಮೂದಿಸಿರುವ ಉಲೇಖಗಳ ಕುರಿತು ನನಗೆ ಗೊತ್ತಿಲ್ಲ. ಸಾಕ್ಷದ ಪ್ರಮಾಣ ಪತ್ರವನ್ನು ಸಲ್ಲಿಸಿ ತುಂಬಾ ದಿನಗಳು ಆಗಿರುವ ಕಾರಣ ಅದರಲ್ಲಿನ ಓಕ್ಕಣಿಕೆಗಳ ಕುರಿತು ನೆನಪಿಲ್ಲ. ಸಾಕ್ಷದ ಪ್ರಮಾಣಪತ್ರವನ್ನು ವಾದಿಯ ಪರವಾಗಿ ನಾನು ಸಲ್ಲಿಸಿದ್ದೇನೆ. ವಾದಿ ಸಲ್ಲಿಸಿದ್ದ ದಾವೆಯಲ್ಲಿ ಅವರ ಪರವಾಗಿ ಯಾರನ್ನ ಸಾಕ್ಷ ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ವಾದಿಯ ಮಾರಾಟಗಾರರನ್ನು ಹಾಗೂ ಅವರ ಹಿಂದಿನ ಮಾರಾಟಗಾರರನ್ನು ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಿದ್ದಾರೆ ಎಂದೆರ ಗೊತ್ತಿಲ್ಲ. ವಾದಿಯ ಹೆಸರಿಗೆ ಖಾತೆ ಮಾಡುವ ಕಾಲಕ್ಕೆ ಜರುಗಿಸಿದ್ದ ಮಹಜರ್ ಹಾಗೂ ವಿಚಾರಣ ಪ್ರಕ್ರಿಯೆಯ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ವಾದಿ ದಾವಾ ಸ್ವತ್ತಿಗೆ ಕಂದಾಯವನ್ನು ಪಾವತಿಸಿದ್ದಾರೆ. ಆ ಕುರಿತು ನ್ಯಾಯಾಲಯಕ್ಕೆ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನಿಪಿ-6 ಅಸೆಸ್ ಮೆಂಟ್ ಅನ್ನು ಪಡೆಯುವ ಸಲುವಾಗಿ ಪಾವತಿಸಿರುವ ಶುಲ್ಕದ ರಸೀತಿ ಎಂದೆರ ಸರಿ. ಸುಧಾ ಮತ್ತು ಶಿವಕುಮಾರ್ ದಂಪತಿಗಳು ವಾದಿಗೆ ಅಸ್ಥಿತ್ವದಲ್ಲಿ ಇಲ್ಲದ ಸ್ವತ್ತಿನ ಕುರಿತಾಗಿ ಕ್ರಯ ಪತ್ರವನ್ನು ಮಾಡಿಕೊಟ್ಟಿದಾರೆ ಎಂದರೆ ಸರಿಯಲ್ಲ. ಅದೇ ರೀತಿ ಅಸ್ಥಿತ್ವದಲ್ಲಿ ಇಲ್ಲದ ಸ್ವತ್ತಿನ ಕುರಿತಾಗಿ ನಾನು ವಾದಿಯಿಂದ ಕ್ರಯದ ಕರಾರು ಪತ್ರವನ್ನು ಮಾಡಿಸಿಕೊಂಡಿದ್ದೇನೆ ಎಂದೆರ ಸರಿಯಲ್ಲ. ನಿಪಿ-4 ರಲ್ಲಿ ಯಾವುದೇ ರೀತಿಯ ಸಿವಿಲ್ ವ್ಯಜ್ಯಗಳನ್ನು ಹೊರತುಪಡಿಸಿ ಅಸೆಸ್ ಮೆಂಟ್ ನಕಲನ್ನು ನೀಡಿದೆ ಎಂದು ಉಲೇಖ ಇದೆ ಎಂದರೆ ಸರಿ. ನಾನು ಹಾಜರುಪಡಿಸಿರುವ

ದಾಖಲಾತಿಗಳನ್ನು ಈ ಹಿಂದಿನ ಅಸಲು ದಾವಾ ಸಂ.101/2007 ರಲ್ಲು ಸಹ ವಾದಿ ಹಾಜರುಪಡಿಸಿದ್ದರು ಎಂದರೆ ಸರಿ. ನಿಪಿ-4 ರ ದಾಖಲಾತಿ 2006-07 ನೇ ಸಾಲಿಗೆ ಸಂಬಂಧಿಸಿದ್ದು ಎಂದರೆ ಸರಿ. ಈಗ ನಿಪಿ-4 ಖಾತೆ ವಜಾ ಆಗಿದೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲಿಗಿ ಕಾಲಾವಕಾಶ ಕೋರಿದ್ದು ನೀಡಲಾಯಿತು)

<u>ಮರು ವಿಚಾರಣೆಃ</u> ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

**ಪ್ರಧಾನ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**